ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

Friday, the 7th March 1980/Phalguna 17, 1901 S.E.

The House met in the Assembly Chamber, Vidhana Soudha, at One of the Clock.

[MR. SPEAKER (SRI P. VENKATARAMANA) in the Chair.]

Obituary Reference

MR. SPEAKER.—I regret to make a reference to the demise of Sri Sirasappa Ijari, a former member of this House. He was a member of this House from 1954-57 and 1962-67.

The House may join me in expressing our sence of sorrow at the passing away of Sri Sirasappa Ijari The feelings of this House will be conveyed to the members of the bereaved family.

I request the members to stand in silence for a minute as a mark of respect to the deceased.

(*The House stood in silence for a minute as a mark of respect to the memory of the departed*)

STARRED QUESTIONS
(to which oral Answers were given)

Medical Officers working in Bangalore City Corporation

4 PROF. SRI S. S. ARAKERI (Balloli).—Will the Minister for Housing and Urban Development be pleased to state:—

(a) the total number of Medical Officers including Assistant Surgeons working in the Bangalore City Corporation;

(b) the number of such officers who have been working on deputation;

(c) the number of Doctors (Medical Officers) appointed by the Corporation during the last 3 years directly:

(d) of them, the number of Lady Medical Officers;

(e) of them, the number of Doctors (Medical Officers) who belong to SC & ST and the percentage that bears to the total number of Doctors (Medical Officers) working in the Corporation?

SRI DHARAM SINGH (Minister for Housing and Urban Development).—

(a) There are 74 posts of Medical Officers and Assistant Surgeons in the Bangalore City Corporation.

(b) 21 Doctors are working in the Bangalore City Corporation on deputation.

(c) 12 Doctors were appointed as local candidates.

(d) Four Lady Doctors were appointed.

(e) There are 5 Scheduled Caste and 2 Scheduled Tribes Doctors working in the Corporation of Bangalore and the ratio is 9.5%.

ಶ್ರೀ ಎಸ್. ಎಸ್. ಆರಕೇರಿ —ಬೆಂಗಳೂರು ನಗರ ಸಭೆಯಲ್ಲಿ ನಿಯೋಜಿತ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ ತಮ್ಮ ಉತ್ತರದಲ್ಲಿ ೨೧ ಎಂದು ಹೇಳಿದ್ದೀರಿ ಈ ೨೧ ಜನರಲ್ಲಿ ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಎಷ್ಟು ಜನರಿದ್ದಾರೆ ಮತ್ತು ಅವರು ಎಷ್ಟು ವರ್ಷ ಗಳಿಂದ ಇದ್ದಾರೆಂಬುದನ್ನು ತಿಳಿಸುತ್ತೀರಾ?

ಶ್ರೀ ಧರ್ಮಸಿಂಗ್.—ನೀವು ಕೇಳಿದ ಪ್ರಶ್ನೆಗೆ ಉತ್ತರ ಹೇಳುವುದಾದರೆ ಮೆಡಿಕಲ್ ಆಫೀಸರ್ ಗಳಾಗಿ ೧೦ ಜನರು ಇದ್ದಾರೆ. ಈ ೧೦ ಜನರಲ್ಲಿ ಎಸ್ ಸಿ. ಮತ್ತು ಎಸ್.ಟಿ. ಇಬ್ಬರು ಇದ್ದಾರೆ. ಅಸಿಸ್ಟೆಂಟ್ ಸರ್ಜನ್ ೬೪ ಜನರು ಇದ್ದಾರೆ. ಇದರಲ್ಲಿ ೩ ಜನ ಎಸ್.ಸಿ. ಮತ್ತು ಒಬ್ಬರು ಎಸ್.ಟಿ. ಇದ್ದಾರೆ. ಲೋಕಲ್‌ಕ್ಯಾಂಡಿಡೇಟ್ಸ್‌ಆಗಿ ೧೨ ಜನರನ್ನು ತೆಗೆದುಕೊಂಡಿರುತ್ತಾರೆ. ಇದರಲ್ಲಿ ಇಬ್ಬರು ಷೆಡ್ಯೂಲ್‌ಕ್ಯಾಸ್ಟ್ ಇದ್ದಾರೆ.

ಶ್ರೀ ಎಸ್. ಎಸ್. ಆರಕೇರಿ.—೨೧ ಜನರನ್ನು ಡೆಪ್ಯುಟೇಷನ್‌ಮೇಲೆ ತೆಗೆದುಕೊಂಡಿದ್ದೇವೆಂದು ಹೇಳಿರುತ್ತೀರಿ. ಈ ೨೧ ಜನರಲ್ಲಿ ಎಷ್ಟುಜನ ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್‌ಟ್ರೈಬ್ಸ್ ಇರುತ್ತಾರೆ ಮತ್ತು ಅವರು ಎಷ್ಟು ವರ್ಷಗಳಿಂದ ಈ ಕಾರ್ಪೊರೇಷನ್‌ನಲ್ಲಿ ಕೆಲಸಮಾಡುತ್ತಿದ್ದಾರೆ.

ಶ್ರೀ ಧರ್ಮಸಿಂಗ್.—ಇದನ್ನು ಸ್ವಲ್ಪ ಪರಿಶೀಲನೆ ಮಾಡಬೇಕಾಗಿರುತ್ತದೆ. ೩-೪ ವರ್ಷಗಳಿಂದಲೂ ಇದ್ದಾರೆಂದು ನನಗನಿಸುತ್ತದೆ

ಶ್ರೀ ಎಸ್. ಎಸ್. ಆರಕೇರಿ —ಮಾನ್ಯ ಸಚಿವರ ಗಮನಕ್ಕೆ ನಾನು ತರುವುದೇನೆಂದರೆ ಡೆಪ್ಯುಟೇಷನ್ ಮೇಲೆ ಬಂದಿರತಕ್ಕಂಥವರು ೫-೧೦ ವರ್ಷಗಳಾದರೂ ಕೂಡ ಅವರು ಅಲ್ಲೇ ಇರುತ್ತಾರೆ. ಅವರಿಗೆ ವರ್ಗಾವಣೆ ಮಾಡಿದರೂ ಕೂಡ ಬೇರೆಕಡೆಗೆ ಹೋಗುವುದಿಲ್ಲ, ಬಹಳ ಅನ್ಯಾಯ ನಡೆಯುತ್ತಿದೆ. ಇದನ್ನು ತಮ್ಮ ಗಮನಕ್ಕೆ ತಂದಿರುತ್ತೇವೆ, ಇದರ ಬಗ್ಗೆ ಕಾಳಜಿಯನ್ನು ತೆಗೆದುಕೊಳ್ಳಬೇಕೆಂದು ಬೇಡಿ ಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಅದನ್ನೆಲ್ಲ ತರಿಸಿ ನೋಡುತ್ತೇನೆ. ೧೮ ಪರ್ಸೆಂಟ್ ಸಿಕ್ಕಬೇಕಾಗಿರುವುದು ಅದು ಸಿಕ್ಕಿಲ್ಲ. ಈಗ ೯ ಪರ್ಸೆಂಟ್ ಸಿಕ್ಕಿರುತ್ತದೆ. ಆದಾಕಾರಣ ಅದನ್ನು ಎಕ್ಸಾಮಿನ್‌ಮಾಡಿ ಮುಂದೆ ಬರತಕ್ಕಂಥ ದಿವಸಗಳಲ್ಲಿ ಕಾರ್ಪೊರೇಷನ್‌ನಲ್ಲಿ ಎಸ್.ಸಿ. ಮತ್ತು ಎಸ್.ಟಿ. ಕೊಡಬೇಕಾದ ಪರ್ಸೆಂಟೇಜ್ ಏನು ಸರ್ಕಾರದ ದೋರಣೆ ಇರುತ್ತದೆ ಅದರಂತೆ ಕೊಡತಕ್ಕಂಥ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್. ಎಸ್. ಆರಕೇರಿ.—ತಮ್ಮ ಆಶ್ವಾಸನೆಗೆ ನಾನು ವಿನಂತಿಯನ್ನು ಸಲ್ಲಿಸುತಾ ಮತ್ತೊಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ಮೂರು ವರ್ಷಗಳ ಮೇಲ್‌ಪಟ್ಟು ಇರತಕ್ಕಂಥ ಡೆಪ್ಯುಟೇಷನ್ ಮೇಲೆ ತೆಗೆದುಕೊಂಡಿರುವವರನ್ನು ವರ್ಗಾವಣೆ ಮಾಡಬೇಕೆಂದು ಮತ್ತು ಎರಡನೆಯ

ದಾಗಿ ೧೨ ಜನ ಲೋಕಲ್‌ಕ್ಯಾಂಡಿಡೇಟ್ಸ್ ಆಗಿ ಏನು ತೆಗೆದುಕೊಂಡಿರುತ್ತೀರಿ ಅವರುಗಳನ್ನು ಕನ್‌ಫರ್ಮ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಡೆಪ್ಯುಟೇಷನ್ ಬಂದಿರತಕ್ಕಂಥವರ. ಸರ್ವೀಸ್ ಲಿಸ್ಟ್ ತರಿಸಿ ಪರಿಶೀಲಿಸುತ್ತೇನೆ ಮತ್ತು ೧೨ ಜನ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಏನು ಇರುತ್ತಾರೆ ಅವರನ್ನು ಕನ್‌ಫರ್ಮ್ ಮಾಡಲು ಎಕ್ಸಾಮಿನ್ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಎಸ್. ಎಸ್. ಆರಕೇರಿ.—ಮೂರು ವರ್ಷಗಳಿಂದಲೇ ಅಲ್ಲ ೧೦ ವರ್ಷಗಳಿಂದಲೂ ಅವರುಗಳ ತಿಳಿವಳಿಕೆಗೆ ಹೋದರೂ ಕೂಡ ಅವರು ಬೇರೆ ಕಡೆ ಹೋಗದೆ ಇದ್ದಾರೆ, ಅಂಥವರನ್ನು ಟ್ರಾನ್ಸ್‌ಫರ್ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಂದು ಹೇಳುತ್ತೇನೆ.

ಶ್ರೀ ಧರ್ಮಸಿಂಗ್.—ಯಾರು ಯಾರು, ಎಷ್ಟು ಎಷ್ಟು ವರ್ಷಗಳಿಂದಿರುತ್ತಾರೆ ಅದನ್ನೆಲ್ಲ ಪಟ್ಟಿ ತರಿಸುತ್ತೇನೆ. ಮತ್ತು ಇನ್ನು ಹೆಚ್ಚು ದಿವಸ ಅವರು ಇರಲು ಅವಕಾಶ ಕೊಡುವುದಿಲ್ಲವೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಐ. ಪಿ. ಡಿ. ಸಾಲಪ್ಪ.—ಈಗ ಕಾರ್ಪೊರೇಷನ್‌ನಲ್ಲಿ ಒಂಬತ್ತೂವರೆ ಪರ್ಸೆಂಟ್ ಇದ್ದು ಇನ್ನೂ ಎಂಟೂವರೆ ಪರ್ಸೆಂಟ್ ಕಡಿಮೆ ಇದೆ ಎಂದು ಹೇಳಿದ್ದೀರಿ, ಲೋಕಲ್ ಕ್ಯಾಂಡಿಡೇಟ್ಸ್‌ಗಳನ್ನು ಈಗಾಗಲೇ ಅಪಾಯಿಂಟ್ ಮಾಡಿದ್ದೀರಿ. ಉಳಿದ ಪರ್ಸೆಂಟ್ ಏನು ಇರುತ್ತದೆ ಅದರಂತೆ ನೇಮಕ ಮಾಡಿಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್.—ನಾನು ಈಗಾಗಲೇ ಹೇಳಿದಹಾಗೆ ಉಳಿದ ಪರ್ಸೆಂಟೇಜ್‌ನ್ನು ಭರ್ತಿ ಮಾಡುವುದಾಗಿ ಪೂರ್ಣ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್. ಎಸ್. ಆರಕೇರಿ.—ಲೋಕಲ್ ಕ್ಯಾಂಡಿಡೇಟ್ಸ್ ತೆಗೆದುಕೊಳ್ಳುವಾಗ ಎಷ್ಟು ಜನರನ್ನು ತೆಗೆದುಕೊಳ್ಳಬೇಕೋ ಅಷ್ಟು ಜನರನ್ನು ತೆಗೆದುಕೊಂಡಿಲ್ಲ. ಈಗ ಮೂರು ವರ್ಷಗಳಾದರೂ ಇನ್ನೂ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣವೇನೆಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಧರ್ಮಸಿಂಗ್.—ಮೂರು ನಾಲ್ಕು ವರ್ಷದಲ್ಲಿ ಆದ ಪ್ರಕರಣಗಳಾಗಿರುತ್ತವೆ. ಆದರೂ ಕೂಡ ಆದೆಲ್ಲವೆನ್ನು ನೋಡಿದ ನಂತರ ಇದರ ಬಗ್ಗೆ ವಿಚಾರಮಾಡಿ ಲೋಕಲ್‌ಕ್ಯಾಂಡಿಡೇಟ್ಸ್‌ಗಳನ್ನು ತೆಗೆದುಕೊಳ್ಳುವ ವಿಷಯದಲ್ಲಿ ಷೆಡ್ಯೂಲ್ಡ್‌ಕ್ಯಾಸ್ಟ್‌ಗೆ ಷೆಡ್ಯೂಲ್ಡ್‌ಟ್ರೈಬ್ಸ್‌ಗೆ ಯಾವರೀತಿ ಪ್ರಾತಿನಿಧ್ಯವನ್ನು ಕೊಡಬೇಕೋ ಆದನ್ನು ನಾನು ಪರಿಶೀಲನೆ ಮಾಡುತ್ತೇನೆ. ಷೆಡ್ಯೂಲ್ಡ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್‌ಟ್ರೈಬ್ಸ್‌ಗೆ ಪ್ರಾತಿನಿಧ್ಯ ಎಷ್ಟರಮಟ್ಟಿಗೆ ಸಿಕ್ಕಬೇಕೋ ಅಷ್ಟರಮಟ್ಟಿಗೆ ಕೊಡಬೇಕೆಂಬ ನಂಬಿಕೆಯುಳ್ಳವನಾಗಿದ್ದೇನೆ, ಆದನ್ನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಐ. ಪಿ. ಡಿ. ಸಾಲಪ್ಪ.—ಇಲ್ಲಿ ವೈದ್ಯಾಧಿಕಾರಿಗಳ ಬಗ್ಗೆ ಉತ್ತರವನ್ನು ಕೊಡಲಾಗಿದೆ. ಅದೇ ರೀತಿ ಇಂಜಿನಿಯರ್ಸ್ ಸಹಾ ಇದ್ದಾರೆ, ಅವರಲ್ಲಿಯೂ ಈ ೧೮ ಪರ್ಸೆಂಟ್ ಮೀಸಲಾತಿಯನ್ನು ಹಿಂದುಳಿದ ಜನಾಂಗದವರಿಗೆ ಮೀಸಲು ಇಡಲಾಗಿದೆಯೆ? ಅಷ್ಟು ಸಂಖ್ಯೆಯನ್ನು ಮೀಸಲು ಇಡದಿದ್ದಾ ಪಕ್ಷದಲ್ಲಿ, ಆ ಬಗ್ಗೆ ಸರ್ಕಾರ ಆದೇಶವನ್ನೇನಾದರೂ ಕೊಟ್ಟಿದೆಯೇ ಎಂಬುದನ್ನು ಅಧ್ಯಕ್ಷರ ಮುಖಾಂತರ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಧರ್ಮಸಿಂಗ್.—ಎಲ್ಲಾ ಕಡೆ ೧೮ ಪರ್ಸೆಂಟ್ ಮೀಸಲಾತಿಯನ್ನು ಇಡುವುದು ಸರ್ಕಾರದ ಉದ್ದೇಶ. ಬೇರೆಯವರಿಗೆ ಏನು ಈ ಮೀಸಲಾತಿಯನ್ನು ಇಡುತ್ತೇವೆಂದು ಮಾಡಿದ್ದೇವೆಯೋ ಅದೇ ರೀತಿ ಇವರಿಗೂ ಇಡುತ್ತೇವೆ ಎನ್ನತಕ್ಕಂತಹ ಭರವಸೆಯನ್ನು ಕೊಡುತ್ತೇನೆ,

Kaveri Gramina Bank in Hassan District

42. SRI K. B. MALLAPA (Arakalgud) —Will the Minister for Finance and Planning be pleased to state :—

(a) whether there is any proposal before the Government to open a Kaveri Gramina Bank in Hassan district;

(b) if so, when it will be opened?